ದಿನಾಂಕಃ 16.07.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದ :**

ನಾನು ದ್ವಿತೀಯ ಪಿ.ಯು.ಸಿ.ವರೆಗೆ ಓದಿರುತ್ತೇನೆ. 1988 ರಲ್ಲಿ ನನ್ನ ವಿವಾಹವಾಗಿರುತ್ತದೆ. ನನ್ನ ಗಂಡನ ಮನೆ ಟಿ.ನರಸೀಪುರ ಆಗಿರುತ್ತದೆ. ನನಗೆ ಇಬ್ಬರು ಗಂಡು ಮಕ್ಕಳು, ಒಬ್ಬ ಇನ್ಫೋಸಿಸ್ ನಲ್ಲಿ ಕೆಲಸ ಮಾಡುತ್ತಾರೆ, ಇನ್ನೊಬ್ಬ ಮಾರುತಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ನನ್ನ ವಿವಾಹವನ್ನು ನನ್ನ ತಂದೆಯವರು ನಿಂತು ನೆರವೇರಿಸಿರುತ್ತಾರೆ. ನನ್ನ ಗಂಡ ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು, ನಂತರ ತಾಲ್ಲೂಕು ಪಂಚಾಯತಿಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿರುತ್ತಾರೆ. ನನ್ನ ಮದುವೆಯನ್ನು ವಿಜೃಂಭಣೆಯಿಂದ ಮಾಡಿರುತ್ತಾರೆಂದರೆ ಸಾಕ್ಷಿ ಸಾಮಾನ್ಯವಾಗಿ ಮದುವೆ ಮಾಡಿರುತ್ತಾರೆ, ನನ್ನ ಗಂಡ ಯಾವುದೇ ವರದಕ್ಷಿಣೆ ತೆಗೆದುಕೊಂಡಿಲ್ಲ. ನನ್ನ ಮದುವೆ ಮೈಸೂರಿನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ನನ್ನ ಗಂಡನಿಗೆ ಅವರ ಕುಟುಂಬದಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ. ನನ್ನ ಗಂಡನ ಮನೆಯವರು ಆರ್ಥಿಕವಾಗಿ ತುಂಬಾ ಚೆನ್ನಾಗಿ ಇರುತ್ತಾರೆಂದರೆ ಸರಿಯಲ್ಲ.

**2.** ನನ್ನ ಮದುವೆಗೆ ಎಷ್ಟು ಖರ್ಚಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆಗೆ ನನ್ನ ತಂದೆ ಮತ್ತು ಸಹೋದರರು ಸಾಕಷ್ಟು ಖರ್ಚು ಮಾಡಿರುತ್ತಾರೆಂದರೆ ಸಾಕ್ಷಿ ನನ್ನ ತಂದೆ ಮಾತ್ರ ಮಾಡಿರುತ್ತಾರೆ ಎನ್ನುತ್ತಾರೆ. ನಾನು ಕುಟುಂಬದವರೊಂದಿಗೆ ಮೈಸೂರಿನ ಗಾಯತ್ರಿಪುರಂನಲ್ಲಿ ವಾಸ ಇದ್ದೇನೆ. ನಾನು ವಾಸವಿರುವ ಸದರಿ ಮನೆ ಮೂಲತಃ ನನ್ನ ತಾಯಿಯವರಿಗೆ ಸೇರಿದ್ದು, ಅದನ್ನು ದಾನಪತ್ರದ ಮೂಲಕ ಪಡೆದಿರುತ್ತೇನೆ. ಸದರಿ ದಾನಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಮನೆಯ ಸಂಖ್ಯೆ 90/ಎ ಆಗಿರುತ್ತದೆ. ದಾನಪತ್ರದ ದಿನಾಂಕ ನೆನಪಿಲ್ಲ. ದಾನಪತ್ರ ಬರೆಯುವಾಗ ನಾನು, ನನ್ನ ತಾಯಿ ಮತ್ತು ಸಾಕ್ಷಿದಾರರು ಇದ್ದರು, ಸಾಕ್ಷಿದಾರರು ಯಾರೆಂದು ನೆನಪಿಲ್ಲ.

**3.** ನನ್ನ ತಂದೆಯ ಆಸ್ತಿಗಳು ಯಾವುವು ಎಂದು ನನಗೆ ಗೊತ್ತು. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಹಾಗೂ ಸದರಿ ದಾಖಲೆಯಲ್ಲಿರುವ ಫೋಟೋ ನನ್ನದು. ಸದರಿ ದಾಖಲೆ ಮೂಲಕ ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಮನೆ ನಂ.191 ರ ಆಸ್ತಿಯನ್ನು ಮಾತ್ರ ವಿಭಾಗ ಮಾಡಿಕೊಂಡಿದ್ದೇವು ಎನ್ನುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಇನ್ನು ಮುಂದೆ ನಮಗೆ ಯಾವುದೇ ಆಸ್ತಿಗಳ ಮೇಲೆ ವಿಭಾಗದ ಹಕ್ಕು ಇರುವುದಿಲ್ಲ ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿಲ್ಲ, ಅದು ಮನೆ ನಂ.191 ಕ್ಕೆ ಮಾತ್ರ ಸಂಬಂಧಿಸಿದ್ದು ಎನ್ನುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಆಸ್ತಿಗಳ ಸಂಬಂಧ ಪೊಲೀಸ್ ಠಾಣೆ ಅಥವಾ ನ್ಯಾಯಾಲಯಕ್ಕೆ ಹೋಗುವುದಿಲ್ಲ ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿಲ್ಲ, ಅದು ಮನೆ ನಂ.191 ಕ್ಕೆ ಮಾತ್ರ ಸಂಬಂಧಿಸಿದ್ದು ಎನ್ನುತ್ತಾರೆ. ನಮ್ಮ ಕುಟುಂಬದಲ್ಲಿ ಈಗಾಗಲೇ ವಿಭಾಗವಾಗಿದ್ದು, ನನಗೆ ಪುನಃ ವಿಭಾಗ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ.

**4.** ನಾನು ವಾಸವಿರುವ ಮನೆಯ ವಿಸ್ತೀರ್ಣ 15*40 ಅಡಿ ಆಗಿರುತ್ತದೆ. ನನ್ನ ತಾಯಿಯ ಹೆಸರಿನಲ್ಲಿ 15*40 ಅಡಿ ಜಾಗ ಇರುತ್ತದೆ.

***ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು, ಸಮಯಾವಾಕಾಶ ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**